ಕರ್ನಾಟಕ ವಿಧಾನ ಸಭೆ

211 ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)
ಮಾನ್ಯ ಮುಖ್ಯಮಂತ್ರಿಗಳು

ಅ) ರಾಜ್ಯದ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:–

1. ಆನೆಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ನಿರೋಧಕ ಕಂದಕಗಳ ನಿರ್ಮಾಣ ಮಾಡುವುದು.
2. ಆನೆಹಾವಳಿ ಇರುವ ಸ್ಥಳಗಳಲ್ಲಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡುವುದು.
3. ಆನೆಗಳು ಅರಣ್ಯ ಪ್ರದೇಶದಿಂದ ಸಾರ್ವಜನಿಕರ ವಸಾಹತುಗಳಿಗೆ ನುಗ್ಗಿ ಹಾವಳಿ ನಡೆಸುವುದನ್ನು ನಿಯಂತ್ರಿಸಲು ಕಾವಲುಗಾರರ ತಾತ್ಕಾಲಿಕ ಕಾವಲು ಪಡೆಗಳನ್ನು ನಿಯೋಜಿಸುವುದು.
4. ಅರಣ್ಯ ಪ್ರದೇಶಗಳಲ್ಲಿ ಆನೆಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳುತೆಗೆಯುವುದು.
5. ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಅರಣ್ಯಗಳಿಗೆ ಹಿಂದಕ್ಕೆ ಕಳುಹಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಇ) ರಾಜ್ಯದಲ್ಲಿ ಆಕಸ್ಮಿಕವಾಗಿ ಆನೆಗಳು ಸಾವಿಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಈ) ಹಾಗಿದ್ದಲ್ಲಿ, ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಆಕಸ್ಮಿಕ ಸಾವಿಗೀಡಾದ ಆನೆಗಳ ಸಂಖ್ಯೆ ಎಷ್ಟು (ವಲಯವಾರು ವಿವರಗಳನ್ನು ನೀಡುವುದು);

ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಆಕಸ್ಮಿಕ ಸಾವಿಗೀಡಾದ ಆನೆಗಳ ವಿವರ ಈ ಕೆಳಗಿನಂತಿದೆ.

ವಿಭಾಗ	ವಲಯ	2004 –05	2005 –06	2006 –07	2007 –08	2008 –09
ಬೆಂಗಳೂರು	ಆನೇಕಲ್					1
ರಾಮನಗರ	ಕನಕಪುರ					1
ಭದ್ರಾ ವಜೀ	ಲಕ್ಕವಳ್ಳಿ	1				
ಕೊಳ್ಳೇಗಾಲ	ಗುಂಡ್ಲುಪೇಟೆ	1	3	2	4	
	ಕೊಳ್ಳೇಗಾಲ			1		1
	ರಾಮಾಪುರ	1		1	2	
	ಎಂ.ಎಂ.ಹಿಲ್ಸ್	3	6	1	6	
	ಹಾನೂರು			1	1	
ಹುಣಸೂರು ವಜೀ	ಆನೆಚೌಕೂರು	1	1			1
	ನಾಗರಹೊಳೆ			1	1	1
	ವೀರನಹೊಸಳ್ಳಿ				1	
	ಮೇಟಿಕುಪ್ಪೆ				1	
	ಅಂತರಸಂತೆ					1
	ಡಿ.ಬಿ.ಕುಪ್ಪೆ					1
ಮಡಿಕೇರಿ	ಸೋಮವಾರ ಪೇಟೆ	1		1	3	
	ಕುಶಾಲನಗರ	2	3		1	1
	ಶನಿವಾರಸಂತೆ		1		5	1
	ತಿತಿಮತಿ			1		
ಹಳಿಯಾಳ	ಹಳಿಯಾಳ		1			
ಕಾವೇರಿ ವಜೀ	ಕೌದಳ್ಳಿ		1			
ಬಂಡೀಪುರ ವಜೀ	ಎ.ಎಂ. ಗುಡಿ		2			
	ಹೆಡಿಯಾಲ			1		
	ಓಂಕಾರ					9
ಮೈಸೂರು	ಹೆ.ಡಿ.ಕೋಟೆ			1	2	2
	ನಂಜನಗೂಡು			1	1	5
	ಸರಗೂರು					1

ಹಾಸನ	ಯೆಸಲೂರು			1	1	
ಒಟ್ಟು:		10	18	13	29	25

ಊ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಊ) ಹಾಗಿದ್ದಲ್ಲಿ, ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಹಾಸನ ಜಿಲ್ಲೆಯ ಆಲೂರು, ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿಯನ್ನು ಹತ್ತಿಕ್ಕುವ ಸಲುವಾಗಿ ಸೂಕ್ಷ್ಮ ಪ್ರದೇಶಗಳಲ್ಲಿ ಕಾಡಾನೆಗಳ ತಡೆಶಿಬಿರಗಳನ್ನು ಸ್ಥಾಪಿಸಿ ಕಾಡಾನೆಗಳು ಹಿಡುವಳಿ ಪ್ರದೇಶಗಳಿಗೆ ದಾಳಿಮಾಡದಂತೆ ಕ್ರಮಕೈಗೊಳ್ಳಲಾಗಿದೆ. ಪ್ರತಿಯೊಂದು ಕ್ಯಾಂಪಿನಲ್ಲಿ ನಾಲ್ಕು ಮಂದಿ ನುರಿತ ಸಿಬ್ಬಂದಿಯನ್ನು ನಿಯೋಜಿಸಿ ಅವರುಗಳಿಗೆ ನಿಸ್ತಂತು ಉಪಕರಣ, ಬಂದೂಕು ಹಾಗೂ ವಾಹನಗಳ ಸೌಲಭ್ಯ ಒದಗಿಸಲಾಗಿದೆ. ಅದಲ್ಲದೇ ಅವರುಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿದ್ದು ಕಾಡಾನೆಗಳು ಹಿಡುವಳಿ ಪ್ರದೇಶಗಳಿಗೆ ಬರದಂತೆ ಅಗತ್ಯ ಮುಂಜಾಗ್ರತೆ ವಹಿಸಲಾಗಿರುತ್ತದೆ. ಮಾನವ ಹತ್ಯಯನ್ನು ಮಾಡಿ ಉದ್ವಿಗ್ನ ಸ್ಥಿತಿಯನ್ನು ಉಂಟುಮಾಡಿದಂತಹ ಪುಂಡ ಕಾಡಾನೆಗಳನ್ನು ಗುರುತಿಸಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ 2005–06ನೇ ಸಾಲಿನಲ್ಲಿ ಎರಡು, 2006–07ನೇ ಸಾಲಿನಲ್ಲಿ ಒಂದು, 2007–08ನೇ ಸಾಲಿನಲ್ಲಿ ಮೂರು ಮತ್ತು 2009–10ನೇ ಸಾಲಿನಲ್ಲಿ ಎರಡು ಕಾಡಾನೆಗಳನ್ನು ಸೆರೆಹಿಡಿಯಲಾಗಿದೆ.

ಅಲ್ಲದೇ ಯಸಳೂರು ವಲಯದ ಬಿಸಲೆ ರಕ್ಷಿತಾರಣ್ಯದ ಸುತ್ತ 3 ಕಿ.ಮೀ. ಉದ್ದದ ಆನೆ ತಡೆ ಕಂದಕವನ್ನು ರಚಿಸಲಾಗಿದ್ದು ಬಹಳ ಹಿಂದಿನಿಂದಲೂ ಇರುವ ಆನೆಹಾವಳಿಯನ್ನು ಶಾಶ್ವತವಾಗಿ ನಿಯಂತ್ರಿಸುವ ಸಲುವಾಗಿ ಭಾರತ ಸರ್ಕಾರದ ಸ್ಟೀರಿಂಗ್ ಕಮಿಟಿ ಸದಸ್ಯರಾದ ಶ್ರೀ. ಎಂ. ಕೆ. ಅಪ್ಪಯ್ಯ ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಶ್ರೀ ಅಜಯ್ ದೇಸಾಯಿ ರವರು ದಿನಾಂಕ: 3 ಮತ್ತು 4 ಜನವರಿ 2007ರಂದು ಹಾಸನ ಜಿಲ್ಲೆಗೆ ಬೇಟಿಕೊಟ್ಟು ಇಲ್ಲಿನ ಸ್ಥಿತಿಗತಿಗಳನ್ನು ಅವಲೋಕಿಸಿ ವರದಿಯ ಶಿಫಾರಸ್ಸಿನ ಮೇರೆಗೆ 25 ಕಾಡಾನೆಗಳನ್ನು ಸೆರೆಹಿಡಿದು ಸುರಕ್ಷಿತ ಸ್ಥಳಕ್ಕೆ ಸ್ಥಾಳಾಂತರಿಸಲು ಅನುಮತಿ ನೀಡಬೇಕೆಂದು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರವು ಕೆಲವು ಮಾಹಿತಿ ಕೋರಿದ್ದು, ಸದರಿ ಮಾಹಿತಿಯನ್ನು ಸಧ್ಯದಲ್ಲಿಯೇ ಕೇಂದ್ರ ಸರ್ಕಾರಕ್ಕೆ ಒದಗಿಸಲಾಗುವುದು.

ಋ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಆನೆಗಳ ಹಾವಳಿಯಿಂದ ಸತ್ತವರ ಸಂಖ್ಯೆ ಎಷ್ಟು; ಸತ್ತವರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ನೀಡಲಾಗಿದೆ;

ಕಳೆದ 3 ವರ್ಷಗಳಲ್ಲಿ ಆನೆಗಳ ಹಾವಳಿಯಿಂದ ಸತ್ತವರ ವಿವರ ಈ ಕೆಳಗಿನಂತಿದೆ

ವರ್ಷ	ಆನೆ ಹಾವಳಿಯಿಂದ ಸತ್ತವರ ಸಂಖ್ಯೆ
2006–07	24
2007–08	36
2008–09	40

ಮೃತರ ಕುಟುಂಬಗಳಿಗೆ ಸರ್ಕಾರದ ಆದೇಶ ಪ್ರಕಾರ ಈಗಾಗಲೇ ಎಕ್ಸ್‌ಗ್ರೇಷಿಯಾವನ್ನು ಪಾವತಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಅಪಜೀ 259 ಡಫ್‌ಡಬ್ಲ್ಯೂಎಲ್ 2006 ದಿನಾಂಕ: 17–01–2007ರ ಪ್ರಕಾರ ಪ್ರಸ್ತುತ ಕಾಡಾನೆಯಿಂದ ಮಾನವಹತ್ಯೆಯಾದ ಪ್ರಕರಣದಲ್ಲಿ ಗರಿಷ್ಠ ರೂ. 1,50,000/– ಗಳ ದಯಾತ್ಮಕ ಧನವನ್ನು ನೀಡಲಾಗುತ್ತಿದೆ.

ಎ) ಈಗ ನೀಡುತ್ತಿರುವ ಪರಿಹಾರ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು;

2008–09ನೇ ಸಾಲಿನ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ 13ನೇ ವಿಧಾನ ಸಭೆ ಮೊದಲನೆ ವರದಿಯಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಮಾನವ ಹಾನಿ ಪ್ರಕರಣಗಳಿಗೆ ದಯಾತ್ಮಕಧನವನ್ನು ಪಾವತಿಸುವ ವಿಷಯದ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ಕನಿಷ್ಠ ರೂ. 2.00 ಲಕ್ಷಗಳ ವರೆಗೆ ಪರಿಷ್ಕರಿಸಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಐ) ಹಾಸನ ಜಿಲ್ಲೆಯಲ್ಲಿ ಆನೆಧಾಮ ಸ್ಥಾಪಿಸುವುದಾಗಿ ಸರ್ಕಾರ ಭರವಸೆ ನೀಡಿದ್ದು ನಿಜವೇ; ಹಾಗಿದ್ದಲ್ಲಿ, ಭರವಸೆಯನ್ನು ಈಡೇರಿಸಲಾಗಿದೆಯೇ?

ಇಲ್ಲ.

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಸಂಖ್ಯೆ: ಅಪಜೀ 100 ಎಫ್‌ಡಬ್ಲ್ಯೂಎಲ್ 2009

ಕರ್ನಾಟಕ ವಿಧಾನ ಸಭೆ
13ನೇ ವಿಧಾನಸಭೆ
3ನೇ ಅಧಿವೇಶನ

212

ಶ್ರೀ. ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)

ಮಾನ್ಯ ಲೋಕೋಪಯೋಗಿ ಸಚಿವರು.

ಅ) ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾದ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಯೋಜನೆ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ರಸ್ತೆಗಳೆಷ್ಟು (ಪ್ಯಾಕೇಜ್‌ವಾರು ವಿವರಗಳನ್ನು ನೀಡುವುದು);